ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆ ಇಲಾಖೆ)

**ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡಾವಳಿಗಳು**

ಉಪಸ್ಥಿತಿ : ಶ್ರೀಕರ್ ಎಂ. ಎಸ್, ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ),
ಬೆಂಗಳೂರು.

ವಿಷಯ :- ರಾಜ್ಯದ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಾರಿ ಮತ್ತು ಜಾಗೃತಿ ವಿಭಾಗಗಳ ಅಧಿಕಾರಿಗಳಿಗೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಕಾಯ್ದೆ ಸಂಖ್ಯೆ 27) ರ ಅಡಿಯಲ್ಲಿ ಭೌಗೋಳಿಕ ಕ್ಷೇತ್ರವ್ಯಾಪ್ತಿ ಮತ್ತು ಶಾಸನಬದ್ಧ ಕಾರ್ಯವ್ಯಾಪ್ತಿ ಆದೇಶದ ತಿದ್ದುಪಡಿ ಬಗ್ಗೆ.

ಉಲ್ಲೇಖ:- ಆದೇಶ ಸಂಖ್ಯೆ: ವಾತೆಅಆ(ಲೆ.ಪ)/ಜೆಡಿಎನ್/ಸಿಆರ್-36/2017-18, ದಿನಾಂಕ: 30.08.2017.

***

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಆದೇಶದ ಕೋಷ್ಟಕದಲ್ಲಿ ರಾಜ್ಯದ ಜಾರಿ ಮತ್ತು ಜಾಗೃತಿ ವಿಭಾಗಗಳ ಅಧಿಕಾರಿಗಳಿಗೆ ನೀಡಲಾಗಿರುವ ಕೇತ್ರವ್ಯಾಪ್ತಿ ಮತ್ತು ಕಾರ್ಯವ್ಯಾಪ್ತಿ ಆದೇಶಕ್ಕೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳಿಗೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಕಾಯ್ದೆ ಸಂಖ್ಯೆ 27) ರ ಕೆಲವು ಪ್ರಕರಣಗಳಡಿಯಲ್ಲಿ ಶಾಸನಬದ್ಧ ಕಾರ್ಯವ್ಯಾಪ್ತಿ ನೀಡುವ ಅವಶ್ಯಕತೆ ಇರುತ್ತದೆ.

ಆದುದರಿಂದ, ಉಲ್ಲೇಖದ ಆದೇಶಕ್ಕೆ ತಿದ್ದುಪಡಿ ಮಾಡಿ ಆದೇಶವನ್ನು ಹೊರಡಿಸುವ ಅವಶ್ಯಕತೆ ಇರುತ್ತದೆ. ಆದುದರಿಂದ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ವಾತೆಅಆ(ಲೆ.ಪ)/ಜೆಡಿಎನ್/ಸಿಆರ್-36/2017-18, ದಿನಾಂಕ: 15.12.2017.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖದ ಆದೇಶವನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

1) ಉಲ್ಲೇಖದ ಆದೇಶದ ಕೋಷ್ಟಕದ ಪುಟ ಸಂಖ್ಯೆ 1, 11, 18, 23, 27, 32, 37, 42 ಮತ್ತು 45ರ ಕ್ರಮ ಸಂಖ್ಯೆ (1)ರ ಅಂಕಣ (4)ರ 'ಕಂಡಿಕೆ 4'ನ್ನು ಈ ಕೆಳಕಂಡಂತೆ ಓದಿಕೊಳ್ಳುವುದು:

- ವ್ಯವಹಾರ ಸ್ಥಳಗಳ ತಪಾಸಣೆಗಾಗಿ ಹಾಗೂ ಪರೀಕ್ಷಾರ್ಥ ಖರೀದಿಗಾಗಿ ಸಂಬಂಧಿಸಿದ ವಿಭಾಗದ ಅಧಿಕಾರಿಗಳಿಗೆ ಕಾರ್ಯಸೂಚಿಗಳನ್ನು ನೀಡುವುದು {2017ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣಗಳು, ಕ್ರಮವಾಗಿ 67(1) ಮತ್ತು 67(12)ರಡಿ}.

2) ಉಲ್ಲೇಖದ ಆದೇಶದ ಕೋಷ್ಟಕದ ಪುಟ ಸಂಖ್ಯೆ 1, 11, 18, 23, 27, 32, 37, 42 ಮತ್ತು 45ರ ಕ್ರಮ ಸಂಖ್ಯೆ (1)ರ ಅಂಕಣ (4)ರ 'ಕಂಡಿಕೆ 5'ರ ನಂತರ 'ಕಂಡಿಕೆ 6'ನ್ನು ಸೇರಿಸಿ ಈ ಕೆಳಕಂಡಂತೆ ಓದಿಕೊಳ್ಳುವುದು:

- ಸಂಬಂಧಿಸಿದ ವಿಭಾಗದ ಅಧಿಕಾರಿಗಳಿಗೆ ವಿಶೇಷ ಪ್ರಕರಣಗಳಲ್ಲಿ ಕ್ಷಿಪ್ರ ಕರನಿರ್ಧಾರಣೆ ಕೈಗೊಳ್ಳಲು ಕಾರ್ಯಸೂಚಿಗಳನ್ನು ನೀಡುವುದು {2017ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 64ರಡಿ}.

3) ಉಲ್ಲೇಖದ ಆದೇಶದ ಕೋಷ್ಟಕದ 'ಪುಟ ಸಂಖ್ಯೆ 1ರ ಕ್ರಮಸಂಖ್ಯೆ 2, ಪುಟ ಸಂಖ್ಯೆ 12ರ ಕ್ರಮಸಂಖ್ಯೆ 2(ಅ), ಪುಟ ಸಂಖ್ಯೆ 19ರ ಕ್ರಮಸಂಖ್ಯೆ 2(ಅ), ಪುಟ ಸಂಖ್ಯೆ 24ರ ಕ್ರಮಸಂಖ್ಯೆ 2(ಅ), ಪುಟ ಸಂಖ್ಯೆ 28ರ ಕ್ರಮಸಂಖ್ಯೆ 2(ಅ), ಪುಟ ಸಂಖ್ಯೆ 33ರ ಕ್ರಮಸಂಖ್ಯೆ 2(ಅ), ಪುಟ ಸಂಖ್ಯೆ 38ರ ಕ್ರಮಸಂಖ್ಯೆ 2(ಅ), ಪುಟ ಸಂಖ್ಯೆ 42ರ ಕ್ರಮಸಂಖ್ಯೆ 2(ಅ) ಮತ್ತು ಪುಟ ಸಂಖ್ಯೆ 46ರ ಕ್ರಮಸಂಖ್ಯೆ 2(ಅ)' ನಲ್ಲಿ "ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಪ್ರಕರಣ" ಈ ಪದಗಳ ನಂತರ "25(8)," ನ್ನು ಸೇರಿಸಿ ಓದಿಕೊಳ್ಳುವುದು.

(ಶ್ರೀಕರ್ ಎಂ ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ಇವರಿಗೆ,

1) ಕೇಂದ್ರ ಕಛೇರಿಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ಮತ್ತು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರಿಗೆ.
2) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು, ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
3) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು, ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
4) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಮೈಸೂರು ವಲಯ, ಮೈಸೂರು / ಮಲೆನಾಡು ವಲಯ, ಶಿವಮೊಗ್ಗ/ ಪಶ್ಚಿಮ ವಲಯ, ಮಂಗಳೂರು / ಹುಬ್ಬಳ್ಳಿ ವಲಯ, ಹುಬ್ಬಳ್ಳಿ / ಉತ್ತರ ವಲಯ, ಬೆಳಗಾವಿ / ಪೂರ್ವ ವಲಯ, ಕಲಬುರಗಿ / ಕೇಂದ್ರ ವಲಯ, ಬಳ್ಳಾರಿ, ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
5) ರಾಜ್ಯದ ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ವಿಭಾಗಗಳು, ಇವರಿಗೆ.
6) ರಾಜ್ಯದ ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು), ಇವರಿಗೆ.

ಪ್ರತಿಯನ್ನು –

1) ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2) ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಇ–ಆಡಳಿತ), ಇವರಿಗೆ ಇಲಾಖೆಯ ಜಾಲತಾಣದಲ್ಲಿ ಮತ್ತು ಹೋಮ್ ಪೇಜ್‌ನಲ್ಲಿ ಪ್ರಕಟಣೆಗಾಗಿ.
4) ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, 8ನೇ ಮೈಲು, ಆರ್ ವಿ ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560 059, ಇವರಿಗೆ ಮುಂದಿನ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಮತ್ತು ಇಲಾಖೆಗೆ ಪ್ರಕಟಣೆಯ 1000 ಪ್ರತಿಗಳನ್ನು ಕಳುಹಿಸಿಕೊಡಬೇಕೆಂಬ ಕೋರಿಕೆಯೊಂದಿಗೆ.